# ಕೊಡುಗೈ ದಾನಿ ರಾಬರ್ಟ್ ಸ್ಮಿತ್

ಜಾರ್ಜಿಯಾದ ಮೋರ್‌ಹೌಸ್ ಪುರುಷರ ಕಾಲೇಜ್ ಒಮ್ಮಿಂದೊಮ್ಮೆಲೇ ಸುದ್ದಿಯಾಗಿದೆ. ಅದಕ್ಕೆ ಕಾರಣ ರಾಬರ್ಟ್ ಎಫ್. ಸ್ಮಿತ್. ಆಫ್ರೊ ಅಮೆರಿಕನ್ ಸಮುದಾಯದಲ್ಲಿ ಅತ್ಯಂತ ಜನಪ್ರಿಯವಾಗಿರುವ ಪ್ರತಿಷ್ಠಿತ ಕಾಲೇಜದು. ಕಳೆದ ವಾರ ರಾಬರ್ಟ್ ಫ್ರೆಡ್ರಿಕ್ ಸ್ಮಿತ್, ಆ ಕಾಲೇಜಿನ ಹೊರಾಂಗಣದಲ್ಲಿ ನೂರಾರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಿದ್ದ. ಮಾತಿನ ಮಧ್ಯೆ 'ಇದು ನನ್ನ ತರಗತಿ. ಇಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳು ಲಕ್ಷಾಂತರ ಡಾಲರ್ ಶೈಕ್ಷಣಿಕ ಸಾಲ ಮಾಡಿಕೊಂಡಿದ್ದಾರೆ. ಈ ಕಾಲೇಜಿಗೆ ಏನಾದರೂ ಮಾಡಬೇಕು ಅಂತ ನನಗನ್ನಿಸುತ್ತಿದೆ. ಇಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಅಷ್ಟೂ ಶೈಕ್ಷಣಿಕ ಸಾಲವನ್ನು ನಾನು ಮರುಪಾವತಿ ಮಾಡುತ್ತೇನೆ...' ಎಂದು ಘೋಷಿಸಿದ. ಅಲ್ಲಿ ಕಲಿಯುತ್ತಿರುವ 396 ವಿದ್ಯಾರ್ಥಿಗಳಿಗೆ ಈ ಸಾಲಮನ್ನಾದ ಲಾಭ ಸಿಕ್ಕಿದೆ. ಜಗತ್ತಿನಾದ್ಯಂತ ಎಲ್ಲ ಮಾಧ್ಯಮಗಳಲ್ಲಿ ಸುದ್ದಿ ಪ್ರಕಟವಾಗಿ, ರಾಬರ್ಟ್ ಸ್ಮಿತ್‌ನ ಹೆಸರು ಎಲ್ಲರ ಬಾಯಲ್ಲಿ ನಲಿದಾಡುತ್ತಿದೆ. ಯಾರೀತ ಎಂದು ಲಕ್ಷಾಂತರ ಮಂದಿ ಗೂಗಲ್‌ನಲ್ಲಿ ತಡಕಾಡುತ್ತಿದ್ದಾರೆ. ಮೋರ್‌ಹೌಸ್ ಕಾಲೇಜಿಗೆ ರಾಬರ್ಟ್ ಸ್ಮಿತ್ ಹೀಗೆ ದಾನ ನೀಡುತ್ತಿರುವುದು ಇದೇ ಮೊದಲಲ್ಲ. ಈ ವರ್ಷದ ಜನವರಿಯಲ್ಲಿ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ನೀಡಲು ಮತ್ತು ಅಲ್ಲೊಂದು ಪಾರ್ಕ್ ನಿರ್ಮಿಸಲೂ ಆತ 15 ಲಕ್ಷ ಡಾಲರ್ ನೀಡಿದ್ದ.

ಅಮೆರಿಕದ ಆಫ್ರಿಕನ್ ಮೂಲದ ಪ್ರಜೆಗಳಲ್ಲೇ ಈಗ ಸ್ಮಿತ್ ಅತಿದೊಡ್ಡ ಶ್ರೀಮಂತ. ಕೆಮಿಕಲ್ ಎಂಜಿನಿಯರ್ ಆಗಿ ಗುಡ್‌ಇಯರ್ ಟೈರ್ಸ್ ಸಹಿತ ಹಲವು ಕಂಪನಿಗಳಲ್ಲಿ ಕೆಲಸ ಮಾಡಿದ ಬಳಿಕ ಇನ್‌ವೆಸ್ಟ್‌ಮೆಂಟ್ ಬ್ಯಾಂಕರ್ ಆದ. ಕೊಲಂಬಿಯಾ ಯೂನಿವರ್ಸಿಟಿಯಲ್ಲಿ ಪಡೆದ ಎಂಬಿಎ ಆತನಿಗೆ ಹಣಕಾಸು ಹೂಡಿಕೆಯ ಮಂತ್ರ, ತಂತ್ರಗಳನ್ನು ಕರಗತ ಮಾಡಿಸಿತ್ತು. 1994ರಲ್ಲಿ ಗೋಲ್ಡ್‌ಮನ್ ಟೆಕ್ನಾಲಜಿ ಇನ್‌ವೆಸ್ಟ್‌ಮೆಂಟ್ ಬ್ಯಾಂಕ್ ಸೇರಿದ ಆತ ನ್ಯೂಯಾರ್ಕ್ ಮತ್ತು ಸಿಲಿಕಾನ್ ವ್ಯಾಲಿಯಲ್ಲಿ ಇನ್‌ವೆಸ್ಟ್‌ಮೆಂಟ್ ಬ್ಯಾಂಕರ್ ಆಗಿ ದೊಡ್ಡ ಹೆಸರು ಸಂಪಾದಿಸಿದ. ಆ್ಯಪಲ್, ಮೈಕ್ರೊಸಾಫ್ಟ್, ಟೆಕ್ಸಾಸ್ ಇನ್‌ಸ್ಟ್ರುಮೆಂಟ್ಸ್, ಇಬೇ, ಯಾಹೂ ಮುಂತಾದ ಕಂಪನಿಗಳಿಗೆ ವಿಲೀನದ ಕುರಿತು ಸಲಹೆ ನೀಡಿ ಹಲವು ವಹಿವಾಟುಗಳನ್ನು ನಿರ್ವಹಿಸಿದ.

ಗೆಳೆಯನೊಬ್ಬನ ಜೊತೆ ಸೇರಿ 1990ರಲ್ಲಿ ಸ್ಮಿತ್ ಸ್ಥಾಪಿಸಿದ ಕಂಪನಿ ವಿಸ್ಟಾ ಈಕ್ವಿಟಿ ಪಾರ್ಟ್‌ನರ್ಸ್. ವಿಶ್ವದಾದ್ಯಂತ ಸುಮಾರು 50 ಸಾಫ್ಟ್‌ವೇರ್ ಕಂಪನಿಗಳಲ್ಲಿ ಒಟ್ಟು 46 ಶತಕೋಟಿ ಡಾಲರ್ ಬಂಡವಾಳವನ್ನು ವಿಸ್ಟಾ ಹೂಡಿದ್ದು, ಆ ಕಂಪನಿಗಳಲ್ಲಿ 60 ಸಾವಿರ ಜನ ಉದ್ಯೋಗಿಗಳಿದ್ದಾರೆ. ಮೈಕ್ರೊಸಾಫ್ಟ್, ಒರಾಕಲ್ ಮತ್ತು ಸ್ಯಾಪ್ ಬಿಟ್ಟರೆ ಜಗತ್ತಿನ ನಾಲ್ಕನೇ ಅತಿದೊಡ್ಡ ಎಂಟರ್‌ಪ್ರೈಸ್ ಸಾಫ್ಟ್‌ವೇರ್ ಕಂಪನಿಯಿದು. ಫಿನಾಸ್ಟ್ರ, ಟಿಬ್ಕೊ, ಸೊಲೆರಾ, ಇನ್‌ಫೊಬ್ಲಾಕ್ಸ್, ಮಿಡಿಯಾಓಶನ್, ವೆರ್ಟಫೋರ್, ಲಿಥಿಯಂ, ಡಾಟ್ಟೊ ಮುಂತಾದ ಪ್ರಮುಖ ಕಂಪನಿಗಳ ಬಂಡವಾಳ ವಿಸ್ಟಾ ಈಕ್ವಿಟಿಯದ್ದೇ. ಈ ಕಂಪನಿಯ ಚೇರ್‌ಮನ್ ಮತ್ತು ಸಿಇಒ ಆಗಿರುವ ರಾಬರ್ಟ್ ಸ್ಮಿತ್, ಅಮೆರಿಕದಲ್ಲಿರುವ ಆಫ್ರಿಕನ್ನರ ಪಾಲಿಗೆ ಬಹುದೊಡ್ಡ ಕೊಡುಗೈದಾನಿ.

2017ರಲ್ಲಿ ಫೋರ್ಬ್ಸ್ ಪ್ರಕಟಿಸಿದ 'ಜಗತ್ತಿನ 100 ಅತಿದೊಡ್ಡ ಬಿಸಿನೆಸ್ ಮೈಂಡ್ಸ್'ಗಳ ಪಟ್ಟಿಯಲ್ಲಿ ಸ್ಮಿತ್ ಹೆಸರಿತ್ತು. 2018ರಲ್ಲಿ ಫೋರ್ಬ್ಸ್ ಮ್ಯಾಗಜಿನ್ ಮುಖಪುಟದಲ್ಲಿ ಅಮೆರಿಕದ ಅತಿದೊಡ್ಡ ಆಫ್ರೊ ಅಮೆರಿಕನ್ ಉದ್ಯಮಿ ಎಂದು ಈತನ ಕುರಿತು ಲೇಖನ ಪ್ರಕಟಿಸಿದ್ದು, ಶ್ರೀಮಂತಿಕೆಯಲ್ಲಿ ಈತ ಇನ್ನೊಬ್ಬ ಆಫ್ರೊ ಅಮೆರಿಕನ್ ಸಾಧಕಿ ಓಪ್ರಾ ವಿನ್‌ಫ್ರೇಯನ್ನು ಹಿಂದಿಕ್ಕಿದ್ದಾನೆ ಎಂದು ವಿವರಿಸಿತ್ತು. ಈತ ಅಮೆರಿಕದ 163ನೇ ಅತಿದೊಡ್ಡ ಶ್ರೀಮಂತ; ಜಗತ್ತಿನ ಶ್ರೀಮಂತರ ಪಟ್ಟಿಯಲ್ಲಿ ಈತನ ಹೆಸರು 480ನೇ ಸ್ಥಾನದಲ್ಲಿದೆ. ಬಿಲ್ ಗೇಟ್ಸ್ ಮುಂತಾದವರ ಜೊತೆಗೆ 'ದಿ ಗಿವಿಂಗ್ ಪ್ಲೆಡ್ಜ್' ಪಟ್ಟಿಗೆ ಸಹಿ ಹಾಕಿದ ಮೊದಲ ಆಫ್ರೊ ಅಮೆರಿಕನ್ ಈತ. 'ಫಂಡ್ ಟು ಫೌಂಡೇಷನ್' ಮೂಲಕ ಜಗತ್ತಿನಾದ್ಯಂತ ಕೋಟ್ಯಂತರ ಡಾಲರ್ ದಾನ ನೀಡುತ್ತಿದ್ದಾನೆ.

ಅಪ್ಪ– ಅಮ್ಮ ಇಬ್ಬರೂ ಪಿಎಚ್‌ಡಿ ಮಾಡಿದ ಶಿಕ್ಷಕರು. ಕರಿಯರೇ ಹೆಚ್ಚಾಗಿದ್ದ ಡೆನ್ವರ್‌ನ ಬೀದಿಯಲ್ಲಿ ವಾಸ ಮಾಡಿದ್ದ ಕುಟುಂಬ, ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್‌ನಿಂದ ಪ್ರಭಾವಿತ. ಸ್ಮಿತ್ ಹೊಟ್ಟೆಯಲ್ಲಿದ್ದಾಗಲೇ ಈತನ ಅಮ್ಮ, ಕಿಂಗ್ ಜೂನಿಯರ್ 'ಐ ಹ್ಯಾವ್ ಎ ಡ್ರೀಮ್' ಭಾಷಣ ಮಾಡಿದ್ದ ವಾಷಿಂಗ್ಟನ್ ಮಾರ್ಚ್‌ನಲ್ಲಿ ಪಾಲ್ಗೊಂಡಿದ್ದರು.

ಜಗತ್ತಿನ ಬಹುದೊಡ್ಡ ದಾನಿಗಳ ಪಟ್ಟಿಯಲ್ಲಿ ಮುಂಚೂಣಿಯಲ್ಲಿರುವ 56ರ ಹರೆಯದ ಸ್ಮಿತ್ ಅದಕ್ಕಾಗಿ ಪ್ರಚಾರ ಪಡೆದದ್ದು ಕಡಿಮೆಯೇ. ಸದ್ಯಕ್ಕೆ ಈತ ಮಾಡುತ್ತಿರುವ ದಾನವೆಲ್ಲ ದಮನಿತರ ಶಿಕ್ಷಣ, ಆರೋಗ್ಯ ಮತ್ತು ಕಲೆ, ಸಂಗೀತ ಕ್ಷೇತ್ರಗಳಿಗೆ. ಕಾರ್ನೆಲ್ ವಿವಿಯಲ್ಲಿ ಜೊತೆಗೆ ಕಲಿಯುತ್ತಿದ್ದ ಸುಸೇನ್‌ಳನ್ನು ಮದುವೆಯಾಗಿ ಮೂವರು ಮಕ್ಕಳನ್ನು ಪಡೆದ ಸ್ಮಿತ್, 2010ರಲ್ಲಿ 22 ವರ್ಷಗಳ ಸಂಸಾರದ ಬಳಿಕ ಡೈವೋರ್ಸ್ ನೀಡಿದ. ಆ ಬಳಿಕ ಪ್ಲೇಬಾಯ್ ರೂಪದರ್ಶಿ, ಫ್ಯಾಷನ್ ಎಡಿಟರ್ ಹೋಪ್ ಡ್ವರಾಸಿಕ್‌ಳನ್ನು ಮದುವೆಯಾದ. ಆಕೆಯಿಂದ ಇಬ್ಬರು ಮಕ್ಕಳು. ಟೆಕ್ಸಾಸ್‌ನ ಆಸ್ಟಿನ್, ಕ್ಯಾಲಿಫೋರ್ನಿಯಾದ ಮಲಿಬು ಮತ್ತು ನ್ಯೂಯಾರ್ಕ್ ಸಿಟಿಯಲ್ಲಿ ಬಂಗಲೆಗಳನ್ನು ಹೊಂದಿರುವ ಸ್ಮಿತ್, ದುಡಿದದ್ದು ಕರಗುವವರೆಗೂ ದಾನ ಮಾಡುವ ಎಂಬ ಪ್ರತಿಜ್ಞೆ ತೆಗೆದುಕೊಂಡಿದ್ದಾನೆ. 'ಫಂಡ್ ಟು ಫೌಂಡೇಷನ್' ಸ್ಥಾಪಿಸಿದ್ದೇ ದಾನ ಹೆಚ್ಚಿಸಲು. 2016ರಲ್ಲಿ 143 ದಶಲಕ್ಷ ಡಾಲರ್ ಆಸ್ತಿ ಹೊಂದಿದ್ದ ಫೌಂಡೇಷನ್, ಅದೇ ವರ್ಷ 160 ದಶಲಕ್ಷ ಡಾಲರ್ ದಾನ ಮಾಡಿದೆ! ಸ್ಮಿತ್‌ನ ಕಂಪನಿಗಳಿಂದ ಬರುವ ಆದಾಯ ಒಂದೇ ಸಮನೆ ಏರುತ್ತಿದ್ದು ಅಲ್ಲಿಂದ ಫೌಂಡೇಷನ್‌ಗೆ ಹಣದ ಹೊಳೆಯೇ ಹರಿದುಬರುತ್ತಿದೆ.

■ ಹನಿ



Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65